# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಸಭೆಯ ಸದಸ್ಯರ ಹೆಸರು | ಶ್ರೀ. ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 883 (1041) |
| ಉತ್ತರಿಸಬೇಕಾದ ದಿನಾಂಕ | 20.08.2025 |
| ವಿಷಯ | ಮೀನುಗಾರರಿಗೆ ಸೀಮೆಎಣ್ಣೆ ಸಬ್ಸಿಡಿ ಕುರಿತು |
| ಉತ್ತರಿಸಬೇಕಾದವರು | ಮಾನ್ಯ ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೀನುಗಾರರಿಗೆ ಪ್ರಸ್ತುತ ಸೀಮೆ ಎಣ್ಣೆಸಬ್ಸಿಡಿ ನೀಡಲಾಗುತ್ತಿದೆಯೇ: ಪ್ರತೀ ಲೀಟರ್‌ಗೆ ಎಷ್ಟು ಸಬ್ಸಿಡಿ ನೀಡಲಾಗುತ್ತಿದೆ: | ಕರಾವಳಿಯ ಮೋಟಾರೀಕೃತ ನಾಡದೋಣಿ ಮೀನುಗಾರರಿಗೆ ಕೈಗಾರಿಕೆ ಸೀಮೆಎಣ್ಣೆಗೆ ಪ್ರತಿ ಲೀಟರ್‌ಗೆ ರೂ.35/- ರಂತೆ ಸಬ್ಸಿಡಿ ನೀಡಲಾಗುತ್ತಿದೆ. |
| ಆ) | ಪ್ರಸ್ತುತ ನಾಡದೋಣಿ ಮೀನುಗಾರರಿಗೆ ನೀಡುತ್ತಿರುವ ಸೀಮೆಎಣ್ಣೆ ಸಬ್ಸಿಡಿ ತುಂಬಾ ಕಡಿಮೆ ಇದ್ದು ಇದರಿಂದ ಮೀನುಗಾರರು ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ: ಸಬ್ಸಿಡಿ ಹೆಚ್ಚಿಸಲು ಸರ್ಕಾರಕ್ಕೆ ಇರುವ ಸಮಸ್ಯೆಯೇನು ; | ಪ್ರತಿ ಲೀಟರ್ ಕೈಗಾರಿಕೆ ಸೀಮೆಎಣ್ಣೆಗೆ ರೂ.35/- ರಂತೆ ಸಬ್ಸಿಡಿ ನೀಡಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕೈಗಾರಿಕೆ ಸೀಮೆಎಣ್ಣೆ ವಿತರಣೆಗಾಗಿ ರೂ.50/- ಕೋಟಿಗಳ ಅನುದಾನ ಒದಗಿಸಲಾಗಿದ್ದು, ಅಂದಾಜು 14285 ಕಿಲೋಲೀಟರ್ ಪ್ರಮಾಣದಲ್ಲಿ ವಾರ್ಷಿಕವಾಗಿ ಕೈಗಾರಿಕೆ ಸೀಮೆಎಣ್ಣೆ ವಿತರಿಸಬಹುದಾಗಿದೆ. |
| ಇ) | ಪ್ರಸ್ತುತ ನಾಡದೋಣಿ ಮೀನುಗಾರರಿಗೆ ನೀಡುತ್ತಿರುವ ಪ್ರತೀ ಲೀಟರ್ ಸೀಮೆ ಎಣ್ಣೆಗೆ 58 ರೂ ಆಗುತ್ತಿದ್ದು ಇದನ್ನು ಕನಿಷ್ಟ 35 ರೂಗಳಿಗೆ ದೊರಕುವಂತೆ ಮಾಡಿದರೆ ಮೀನುಗಾರರಿಗೆ ಅನುಕೂಲವಾಗುವುದಿಲ್ಲವೇ: ಈ ಬಗ್ಗೆ ಸರ್ಕಾರ ಯಾಕೆ ಕ್ರಮವಹಿಸಬಾರದು : | ನಾಡದೋಣಿ ಮೀನುಗಾರರಿಗೆ ಪ್ರಸ್ತುತ ರೂ.35/- ಗಳ ರಿಯಾಯಿತಿ ದರದಲ್ಲಿ ಕೈಗಾರಿಕೆ ಸೀಮೆಎಣ್ಣೆ ಸರಬರಾಜು ಮಾಡಲಾಗುತ್ತಿದೆ. |
| ಈ | ನಾಡದೋಣಿ ಮೀನುಗಾರರು ಬಳಸುವ ಉತ್ತಮ ಗುಣಮಟ್ಟದ ಮೀನಿನ ಬಲೆ (ರಾಣಿ ಬಲೆ) ಖರೀದಿಸಲು ಸಬ್ಸಿಡಿ ನೀಡುವ ಬಗ್ಗೆ ಸರ್ಕಾರ ಯಾಕೆ ಕ್ರಮ ವಹಿಸಬಾರದು | ಪ್ರಸ್ತುತ ಮೀನಿನ ಬಲೆ (ರಾಣಿಬಲೆ) ಖರೀದಿಸಲು ನಾಡದೋಣಿ ಮೀನುಗಾರರಿಗೆ ಸಹಾಯಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಪಸಂಮೀ ಇ-154 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು ಒಳನಾಡು
ಜಲಸಾರಿಗೆ ಸಚಿವರು